ಜೆಎಸ್‌ಎಸ್ ಮಹಾವಿದ್ಯಾಪೀಠ

ಜಗದ್ಗುರು ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ, ಮೈಸೂರು

# ಜ್ಞಾನ ವಾರಿಧಿ–31

## ಡಿಜಿಟಲ್ ಸಾಪ್ತಾಹಿಕ ಉಪನ್ಯಾಸ ಕಾರ್ಯಕ್ರಮ

**5 ಜುಲೈ 2021 * ಸೋಮವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ

ಸುತ್ತೂರು ಶ್ರೀಕ್ಷೇತ್ರ

ಉಪನ್ಯಾಸ



**ಗೌ.ನ್ಯಾ. ಶ್ರೀ ಪಿ. ವಿಶ್ವನಾಥ ಶೆಟ್ಟಿ**

ಲೋಕಾಯುಕ್ತರು

ಕರ್ನಾಟಕ ಲೋಕಾಯುಕ್ತ

ಬೆಂಗಳೂರು

ವಿಷಯ: ಕಾನೂನು ಅರಿವು ಮತ್ತು ನೆರವು

(ಉಪನ್ಯಾಸದ ನಂತರ ಆನ್‌ಲೈನ್‌ನಲ್ಲಿ ಬರುವ ಪ್ರಶ್ನೆಗಳಲ್ಲಿ ಆಯ್ದವುಗಳಿಗೆ ಉತ್ತರಿಸಲಾಗುವುದು)

ಆನ್‌ಲೈನ್ ಮೂಲಕ ನೇರವಾಗಿ ವೀಕ್ಷಿಸಲು ಹಾರ್ದಿಕ ಸ್ವಾಗತ

LIVE STREAMING

YouTube http://Youtube.com/c/JSSMahavidyapeethaonline

https://www.facebook.com/JSSMVP

**ಜ್ಞಾನ ವಾರಿಧಿ** ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮವನ್ನು 2020ರ ಡಿಸೆಂಬರ್ ತಿಂಗಳಿನಿಂದ ಪ್ರತಿ ಸೋಮವಾರ ಏರ್ಪಡಿಸಿಕೊಂಡು ಬರಲಾಗುತ್ತಿದೆ. ಧರ್ಮ, ಅಧ್ಯಾತ್ಮ, ಯೋಗ, ಕಲೆ, ಸಾಹಿತ್ಯ, ಸಂಸ್ಕೃತಿ, ಆರೋಗ್ಯ, ಜೀವನಶೈಲಿ, ವಿಜ್ಞಾನ, ತಂತ್ರಜ್ಞಾನ ಮುಂತಾದ ವಿಷಯಗಳು ಮತ್ತು ಪ್ರಚಲಿತ ವಿದ್ಯಮಾನಗಳನ್ನು ಕುರಿತು ದೇಶ ಮತ್ತು ವಿದೇಶದ ವಿವಿಧ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸಗಳನ್ನು ಆಯೋಜಿಸಲಾಗುತ್ತಿದೆ.

**ಗೌರವಾನ್ವಿತ ನ್ಯಾಯಮೂರ್ತಿಗಳಾದ ಶ್ರೀ ಪಿ. ವಿಶ್ವನಾಥ ಶೆಟ್ಟಿಯವರ** ಶಿಕ್ಷಣ ಉಡುಪಿಯಲ್ಲಿಯೆ ಆಯಿತು. ಎನ್‌ಸಿಸಿಯಲ್ಲಿ ಅತೀವ ಆಸಕ್ತಿ ಹೊಂದಿದ್ದರು. ವಿದ್ಯಾರ್ಥಿ ಜೀವನದಲ್ಲೇ ನಾಯಕತ್ವದ ಗುಣಗಳನ್ನು ಮೈಗೂಡಿಸಿಕೊಂಡರು. 1965ರಲ್ಲಿ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಅಡ್ವೊಕೇಟ್ ಜನರಲ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಕೃಷ್ಣರಾವ್‌ರವರ ಬಳಿ ಸಹಾಯಕರಾಗಿ (ಅಪ್ರೆಂಟಿಸ್) ಕೆಲಸಕ್ಕೆ ಸೇರಿದರು. 1966ರಲ್ಲಿ ಕರ್ನಾಟಕ ಬಾರ್ ಕೌನ್ಸಿಲ್‌ನಲ್ಲಿ ನೋಂದಣಿಯಾಯಿತು. ಕಿರಿಯ ವಕೀಲರಾಗಿ 1971ರವರೆಗೆ ಕಾರ್ಯನಿರ್ವಹಿಸಿದರು. 1971ರಿಂದ ಸ್ವತಂತ್ರ ನ್ಯಾಯವಾದಿಗಳಾಗಿ ಶೆಟ್ಟಿ ಅಂಡ್ ಹೆಗ್ಡೆ ಅಸೋಸಿಯೇಟ್ಸ್ ಪ್ರಾರಂಭಿಸಿದರು. ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ಕಾಲೇಜಿನಲ್ಲಿ ಒಪ್ಪೊತ್ತಿನ ಆಧ್ಯಾಪಕರಾದರು. ಕರ್ನಾಟಕ ಬಾರ್ ಕೌನ್ಸಿಲ್ಲಿನ ಸದಸ್ಯರಾಗಿ, ಅಧ್ಯಕ್ಷರಾಗಿ ವಿಶಿಷ್ಟ ಛಾಪು ಮೂಡಿಸಿದರು. ಭಾರತೀಯ ಬಾರ್ ಕೌನ್ಸಿಲ್ಲಿನಲ್ಲಿ ಕರ್ನಾಟಕದ ಪ್ರತಿನಿಧಿಗಳಾಗಿ, ನ್ಯಾಷನಲ್ ಲಾ ಸ್ಕೂಲಿನ ಹಲವಾರು ಸಮಿತಿಗಳಲ್ಲಿ ಸೇವೆ ಸಲ್ಲಿಸಿದರು. ಉದ್ಯೋಗ ಕ್ಷೇತ್ರದಲ್ಲಿ ಉನ್ನತೋನ್ನತ ಸ್ಥಾನಗಳನ್ನು ಅಲಂಕರಿಸಿದ ಹೆಗ್ಗಳಿಕೆ ಅವರದು. 1995 ರಿಂದ 2006 ರವರೆಗೆ ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ 11 ವರ್ಷಗಳ ಅವಿರತ ಸೇವೆ ಸಲ್ಲಿಸಿದರು. ನ್ಯಾಯಾಧೀಶರ ಸಮಿತಿ ಸದಸ್ಯರಾಗಿ ವಿದೇಶಕ್ಕೆ ಭೇಟಿ ನೀಡಿದರು. ಕರ್ನಾಟಕ ಜ್ಯುಡಿಷಿಯಲ್ ಅಕ್ಯಾಡೆಮಿಯ ಸದಸ್ಯರಾಗಿ ನಾಮಕರಣಗೊಂಡರು. ಅವರು ನಿರ್ವಹಿಸಿದ ವಿಭಿನ್ನ ರೀತಿಯ ಜವಾಬ್ದಾರಿಗಳು ಅವರಿಗೆ ಕಾನೂನು ಕ್ಷೇತ್ರದಲ್ಲಿ ವಿಶಿಷ್ಟ ಸ್ಥಾನ ತಂದುಕೊಟ್ಟಿವೆ.

ಹಲವಾರು ಜನಪರ ತೀರ್ಪುಗಳಿಂದ ಶ್ರೀಸಾಮಾನ್ಯರ ನ್ಯಾಯಮೂರ್ತಿ ಎಂಬ ಹೆಸರು ಪಡೆದಿದ್ದಾರೆ. ನಿವೃತ್ತಿಯ ಬಳಿಕ ಸರ್ವೋಚ್ಚ ನ್ಯಾಯಾಲಯದಲ್ಲಿ ನ್ಯಾಯವಾದಿಗಳಾಗಿ ಕಾರ್ಯನಿರ್ವಹಿಸಿದರು. ಕರ್ನಾಟಕ, ತೆಲಂಗಾಣ, ಪಾಂಡಿಚೇರಿ, ಆಂಧ್ರಪ್ರದೇಶ ಸರ್ಕಾರಗಳಿಗೆ ಕಾನೂನು ಸಲಹೆಗಾರರಾದರು. ಇಂಗ್ಲೆಂಡ್ ಅಮೆರಿಕ, ನ್ಯೂಜಿಲೆಂಡ್, ಆಸ್ಟ್ರೇಲಿಯ, ಸಿಂಗಪುರ, ಸ್ವಿಜರ್ಲೆಂಡ್, ಫ್ರಾನ್ಸ್, ಮಲೇಷಿಯಾ, ಥೈಲ್ಯಾಂಡ್ ಮೊದಲಾದ ದೇಶಗಳಲ್ಲಿ ಪ್ರವಾಸ ಮಾಡಿ ಅಲ್ಲಿನ ಕಾನೂನು ಸುವ್ಯವಸ್ಥೆಯ ಅಧ್ಯಯನ, ಪರಾಮರ್ಶೆ ಮಾಡಿದ್ದಾರೆ. ಸಾಮರ್ಥ್ಯ, ನಿಸ್ಪೃಹತೆಯ ಹಿನ್ನೆಲೆಯಲ್ಲಿ 2017ರಿಂದ ಕರ್ನಾಟಕ ರಾಜ್ಯ ಲೋಕಾಯುಕ್ತರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

**ಜ್ಞಾನ ವಾರಿಧಿ–32 * 12 ಜುಲೈ 2021**

**ಶ್ರೀ ಮತ್ತೂರು ನಂದಕುಮಾರ**

ನಿರ್ದೇಶಕರು
ಭಾರತೀಯ ವಿದ್ಯಾಭವನ
ಲಂಡನ್, ಇಂಗ್ಲೆಂಡ್

ವಿಷಯ: ಭಾರತದ ಸಾಂಸ್ಕೃತಿಕ ಶ್ರೀಮಂತಿಕೆ

**ಜ್ಞಾನ ವಾರಿಧಿ–33 * 19 ಜುಲೈ 2021**

**ಡಾ. ಜೆ.ಎನ್. ಭಟ್**

ಹಿರಿಯ ವೈದ್ಯರು
ಮಂಗಳೂರು ನರ್ಸಿಂಗ್ ಹೋಂ
ಮಂಗಳೂರು

ವಿಷಯ: ಸ್ವಾಸ್ಥ್ಯ ಜೀವನ